ಅಸಲು ದಾವಾ ಸಂಖ್ಯೆ .19-2016

ಪಿ.ಡಬ್ಲ್ಯೂ- 1

ದಿಃ 24-09-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 2 , 4 , 5 ಪ್ರತಿ ವಾದಿ ಪರ ವಕೀಲರಿಂದ ಃ-

ದಿಃ 09-10-1967 ರ ನೋಂದಾಣಿ ವಿಭಾಗ ಪತ್ರದ ನಂತರ ನಾವು ಮತ್ತು ನಮ್ಮ ಸಹೋದರರು ಜಮೀನುಗಳ ಪ್ರತ್ಯೇಕ ಇದ್ದೇವೆ ಎಂದು ಸೂಚಿಸಿದರೆ ಜಮೀನುಗಳು ಪ್ರತ್ಯೇಕವಾಗಿ ಇದ್ದೇವೆ ಆದರೆ ಮನೆ ಆಸ್ತಿಗಳಲ್ಲಿ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ . ಅಂದಿನಿಂದಲೂ ಕೂಡಾ ನಾನು ಪ್ರತ್ಯೇಕವಾಗಿ ಎಲ್ಲಾ ಕುಟುಂಬದ ಆಸ್ತಿಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದೇವೆ ಎಂರದೆ ಸರಿಯಲ್ಲ.ವಿಭಾಗ ಆಗುವ ಕಾಲಕ್ಕೆ ಸುಮಾರು 22 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ನನಗೆ 12 ವರ್ಷ ಅಗಿತ್ತು ಎಂದು ನುಡಿಯುತ್ತಾರೆ .ನನಗೆ ಈಗ ತೋರಿಸಿದ ಶಾಲಾ ದೃ. ಪತ್ರ ನನ್ನದೇ ಆಗಿರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ ಕಾರಣ ನಿಡಿ 1 ಎಂದು ಗುರುತಿಸಲಾಯಿತು .

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ಅಸೆಸ್ ಮೆಂಟ್ ನಂ 12 ರಲ್ಲಿರುವ ಮನೆಯನ್ನು 1965 ರಲ್ಲಿ ಕಟ್ಟಿರುತ್ತೇನೆ .ಅಸೆಸ್ ಮೆಂಟ್ ನಂ 13 ರಲ್ಲಿ ನನ್ನ ಅಣ್ಣ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.ನನ್ನ ಅಣ್ಣ ತೀರಿಕೊಂಡ ನಂತರ ಸದರಿ ಮನೆ 4 ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿಯಲ್ಲ. ಅಸೆಸ್ ಮೆಂಟ್ ನಂ 12 ರಲ್ಲಿ ಒಟ್ಟು ವಿಸ್ತೀರ್ಣ 45 120 ಅಡಿ ಇದೆ ಎಂದು ಸೂಚಿಸಿದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನನ್ನ ಅಣ್ಣ ಲೋಕೇಶ ಚುತಾವಣೆ ಮೇರೆಗೆ ಓಎಸ್ 194/2009 ರ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.ಅಲ್ಲದೇ ದಿಃ 03-01-2016 ರಲ್ಲಿ ನನ್ನ ಹಿಸ್ಸೆಯನ್ನು ಕೊಡಿ ಎಂದು ಪ್ರತಿವಾದಿಗಳನ್ನು ಕೇಳಿದ್ದೆ ಎಂದರೆ ಸರಿ ಯಲ್ಲ.

ನಮ್ಮ ಗ್ರಾಮವನ್ನು ತೆವರಗೋಪಗೊಂಡನಹಳ್ಳಿ ಎಂದು ಕೂಡಾ ಕರೆಯುತ್ತಾರೆ ಎಂದರೆ ಸರಿ .ನಮ್ಮ ಗ್ರಾಮ ಸ್ಥಳಾಂತರಗೊಂಡ ಗ್ರಾಮ ಎಂದರೆ ಸರಿ .ದಿಃ 27-09-1963 ರಲ್ಲಿ ಮಾನ್ಯ ಎ.ಸಿ ಶಿವಮೊಗ್ಗ ರವರು ಸ್ಥಳಾಂತರಗೊಂಡ ಗ್ರಾಮಕ್ಕಾಗಿ ಸರ್ವೆ ನಂ 80 ರಲ್ಲಿ 22 ಎಕರೆ ಜಮೀನ ವಿಸ್ತೀರ್ಣವನ್ನು ಸರಿಪಡಿಸಲು ಅನುಮತಿ ಪತ್ರವನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದುನುಡಿಯುತ್ತಾರೆ . 1979-80 ರಲ್ಲಿ ನಮಗೆ ಸ್ಥಳಾಂತರಗೊಂಡ ಗ್ರಾಮದಲ್ಲಿ ನಿವೇಶನಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ.ಸದರಿ ಆದೇಶದಂತೆ ಒಟ್ಟು 14 ಜನರಿಗೆ ನಿವೇಶನಗಳನ್ನು

ಕೊಟ್ಟಿರುತ್ತಾರೆ .ನನಗೆ ಈಗ ತೋರಿಸಿದ ದಾಖಲೆಯಂತೆ ನನಗೂ ಮತ್ತು ನನ್ನ ಅಣ್ಣನಿಗೂ ಜಂಟಿಯಾಗಿ ಆಸ್ತಿ ನಂ 12 ರಲ್ಲಿ 45 X 120 ಅಡಿ ನಿವೇಶನವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಅಲ್ಲದೇ ನನ್ನ ಅಣ್ಣ ಜಿ.ಹಾಲಪ್ಪನಿಗೆ ಆಸ್ತಿ ನಂ 13 ರಲ್ಲಿ 45 X 120 ಅಡಿ ನಿವೇಶನವನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ದಾಖಲೆ ಎಂದು ನುಡಿಯುತ್ತಾರೆ .ಆಸ್ತಿ ನಂ 13 ರ ಜಾಗವನ್ನು ನಾನು ಒಳ ಹಾಕುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಆಸ್ತಿ ನಂ 13 ರ ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.ನನಗೆ ಮಂಜೂರಾಗಿದ ದಾಖಲೆ ಮತ್ತು ಕಂದಾಯ ರಶೀದಿಗಳನ್ನು ನಾನು ನ್ಯಾಯಾಾಲಯಕ್ಕೆ ಹಾಜರುಪಡಿಸಿದ್ದೇನೆ .ನಾನು ಹಾಜರುಪಡಿಸಿರುವ ವಂಶವೃಕ್ಷ ಸುಳ್ಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ 2 ರ ದಾಖಲೆಯಲ್ಲಿ ಆಸ್ತಿ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದು ಸೂಚಿಸಿದರೆ ಸಾಕ್ಷಿ ಅದು ಸುಳ್ಳು ದಾಖಲೆ ಎಂದು ನುಡಿಯುತ್ತಾರೆ .ನಮ್ಮ ಗ್ರಾಮವು ಸ್ಥಳಾಂತರಗೊಂಡ ನಂತರ ಸ್ಥಳಾಂತರಗೊಂಡ ಗ್ರಾಮದಲ್ಲಿ ನಾವು ವೈಯಕ್ತಿಕ ಸ್ವಂತ ನಿವೇಶನಗಳನ್ನು ಮಾಡಿಕೊಂಡಿದ್ದೇವೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ . ಓ.ಎಸ್ 194/2009 ವಜಾಯಾದ ನಂತರ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಿದ್ದೇವೆ ಸರಿಯಲ್ಲ. ಆಸ್ತಿ ನಂ 13 ರಲ್ಲಿ ಯಾವುದೇ ಹಕ್ಕು , ಸ್ವಾಧೀನ ,ಬಾಧ್ಯತೆ ಇಲ್ಲದೇ ಇದ್ದಾರೂ ಸಹ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.